ಸ್ತಿಮಿತ ಕಳೆದುಕೊಂಡಿದ್ದರು. ಅಷ್ಟರವರೆಗೆ ನಾನು ಅವರ ಪ್ರೀತಿಯ ಹೊಳೆಯಲ್ಲಿ ಮಿಂದವಳಾಗಿದ್ದೆ. ಅದು ನಾನು ಕಾಣದ ಅವರ ರೌದ್ರರೂಪ. ನನಗೆ ಏನಾಗುತ್ತಿದೆ ಎಂದೇ ಅರ್ಥವಾಗಲಿಲ್ಲ. ಒಮ್ಮೆಗೆ ನನ್ನ ಕೈ ಹಿಡಿದು ದರದರನೆ ಎಳೆದುಕೊಂಡು ನಮ್ಮ ಕೋಣೆಯೊಳಗೆ ಬಂದವರೇ, ನಾನೇ ತೋಟದಿಂದ ಚೆನ್ನಾಗಿದೆ ಎಂದು ತಂದು ಮೂಲೆಯಲ್ಲಿ ಇರಿಸಿದ್ದ ಬಿದಿರಿನ ಕೋಲಿನಲ್ಲಿ ಚೆನ್ನಾಗಿ ಎಲ್ಲೆಂದರಲ್ಲಿ ಬಾಸುಂಡೆ ಬರುವಂತೆ ಬಾರಿಸಿದರು. ನನಗೆ ಇದು ಅನಿರೀಕ್ಷಿತವಾಗಿತ್ತು. ಮಗುವಿಗಾಗ ಒಂದು ವರ್ಷ, ಆಗಷ್ಟೇ ನನಗೆ ಮತ್ತೆ ಮುಟ್ಟು ಬರುವುದಕ್ಕೆ ಪ್ರಾರಂಭವಾಗಿತ್ತು. ಕೋಪದ ಭರದಲ್ಲಿ ಎಲ್ಲೆಲ್ಲಿ ಏಟು ಬಿತ್ತು ತಿಳಿಯದು. ಚೀರಿಕೊಳ್ಳುವುದಕ್ಕೂ ಅವಕಾಶವಾಗಿರಲಿಲ್ಲ. ನಾನು ಏಟಿನಿಂದ ತಪ್ಪಿಸಿಕೊಳ್ಳುವ ಹೊರಳಾಟದಲ್ಲಿ ಇದ್ದೆ. ಆದರೆ, ಕೊನೆಯೇಟು ಬಿದ್ದದ್ದು ನನ್ನ ಕಿಬ್ಬೊಟ್ಟೆಗೆ. ನೋವಿಗೆ ಕಣ್ಣು ಕತ್ತಲೆ ಬಂತು. ಆದರೂ ಅವರ ಆವೇಶ ಇಳಿದಿರಲಿಲ್ಲ. ಮತ್ತೆ ಕೋಲು ಎತ್ತಿದಾಗ ನಾನು ಅರೆ ಕ್ಷಣದಲ್ಲಿ ತೊಟ್ಟಿಲಿನಲ್ಲಿ ಅರೆನಿದ್ದೆಯಲ್ಲಿದ್ದ ಮಗುವನ್ನು ಎರಡೂ ಕೈಗಳಿಂದ ಬಾಚಿ ಎತ್ತಿ ಎದೆಗವಚಿಕೊಳ್ಳಲು ಹೋದೆ. ಅವರು ಕನಿಕರಿಸಬಹುದೆಂಬ ನಿರೀಕ್ಷೆಗೆ. ಅದು ನಾನು ಮಾಡಿದ ದೊಡ್ಡ ತಪ್ಪು. ಈ ಸಲ ಏಟು ನನ್ನನ್ನು ಸವರಿ ಮಗುವಿನ ಮೇಲೆ ಸವಾರಿ ಮಾಡಿತು. ಕ್ಷಣ ಮಾತ್ರದಲ್ಲಿ ಎಲ್ಲವೂ ನಡೆದುಹೋಯಿತು. ತೊಟ್ಟಿಲು ಬಡಿದ ಏಟಿಗೇ ತಲ್ಲಣಿಸಿ ಹೋಗಿದ್ದ ಕಂದ ಈಗ ಚೀರಿ ಅಳಲಾರಂಭಿಸಿದ. ಮೊದಲೇ ತಲೆಗೆ ಏಟಾದ ಮಗು. ಮತ್ತೆ ಬೀಸಿದ ಬಿದಿರ ಕೋಲಿನ ನೇರ ಹೊಡೆತ ಅದೇ ಮೃದು ತಲೆಚಿಪ್ಪಿಗೆ ಬಿತ್ತು. ಹಸುಗೂಸಿನ ರಕ್ತ ತೊಟ್ಟಿಲನ್ನು ತೋಯಿಸಿತ್ತು. ಆಸ್ಪತ್ರೆಗೆ ಸಾಗಿಸುವ ಹಾದಿಯಲ್ಲಿ ಮಗು ಕೊನೆಯುಸಿರೆಳೆಯಿತು. ಏಟು ಮಗುವಿಗೆ ತಗಲಿತು ಎಂದು ಅರಿವಾದಾಗ, ನನ್ನ ತಳ್ಳಿ ಅವರು ಮಗುವನ್ನೆತ್ತಿಕೊಂಡು ಹೊರಗೋಡಿದ್ದರು. ಹೊರಗಿನವರಿಗಿದು ಹಳೆಯ ಗಾಯದ ಮುಂದುವರಿಕೆ. ನಾನು ಕುಸಿದು ಬಿದ್ದೆ. ಯಾರೂ ನನ್ನತ್ತ ತಿರುಗಿಯೂ ನೋಡಲಿಲ್ಲ. ಇವರು ಕೂಡ ನನಗೇನಾಗಿದೆ ಎಂದೂ ನೋಡದೆ ಹಾಗೇ ಬಿಟ್ಟು ಹೊರನಡೆದರು. ನಾನು ಅಲ್ಲಿಯೇ ಕೋಣೆಯೊಳಗೆ ಮತಿಕೆಟ್ಟು ಬಿದ್ದಿದ್ದೆ. ಎಲ್ಲರ ದೃಷ್ಟಿಯಲ್ಲಿ ನಾನು ಮಗುವನ್ನು ಕೊಂದವಳು.

ಎಲ್ಲವೂ ಮುಗಿದು ಹೋಯಿತು ಅನ್ನಿಸಿತ್ತು. ನಡುರಾತ್ರಿ ಅವರು ಕೋಣೆಯೊಳಗೆ ಬಂದು ಮುಖಕ್ಕೆ ನೀರು ಚಿಮುಕಿಸಿ ಎಚ್ಚರಿಸಿದರೂ ನನಗೆ ಏಳುವುದಕ್ಕೆ ಆಗುತ್ತಿರಲಿಲ್ಲ. ಕೊನೆಗೆ ಅವರೇ ನನ್ನನ್ನೆತ್ತಿ ಮಂಚದ ಮೇಲೆ ಮಲಗಿಸಿದರು. ನೋಡಿದರೆ ನಾನುಟ್ಟ ಸೀರೆ ಪೂರ್ತಿ ರಕ್ತದಿಂದ ತೋಯ್ದು ಹೋಗಿತ್ತು. ನನಗೆ ವಿಪರೀತ ರಕ್ತಸ್ರಾವವಾಗುತ್ತಿತ್ತು. ಶರೀರದ ರಕ್ತವೆಲ್ಲಾ ಬಸಿದು ಬಿಳುಚಿಗೊಂಡಿದ್ದೆ. ಹೊರಗಿನ ಏಟಿನ ತೀವ್ರತೆ ಒಳಗೆಲ್ಲಿಯವರೆಗೆ ತಲುಪಿತೋ ತಿಳಿಯದು. ಒಳಗಂತೂ ಗಾಯ ಕೀವುಗಟ್ಟುತ್ತಿತ್ತು. ನಾನು ಯಾರು ಹತ್ತಿರ ಬಂದರೂ ಗಡಗಡ ನಡುಗುತ್ತಿದ್ದೆ. ಇವರು ಹತ್ತಿರ ಬಂದರಂತೂ ಭೀತಿಯಿಂದ ಬಿಳುಚಿ ಹೋಗುತ್ತಿದ್ದೆ. ನನ್ನ ಕೆಳ ಹೊಟ್ಟೆಗೆ ಬಿದ್ದ ಏಟಿನಿಂದ ಗರ್ಭಕೋಶಕ್ಕೆ ತೊಂದರೆಯಾಗಿತ್ತು. ಪ್ರತಿ ತಿಂಗಳೂ ವಿಪರೀತ ರಕ್ತಸ್ರಾವ. ಇದೆಲ್ಲಾ ಕಡಿಮೆಯಾಗುವಷ್ಟರಲ್ಲಿ ಇಬ್ಬರೂ ಕುಸಿದು ಹೋಗಿದ್ದೆವು. ಏನೇನೋ ಹಳ್ಳಿಮದ್ದು, ಚಿಕಿತ್ಸೆ ಎಂದು ತಾರುಣ್ಯ ಪೂರ್ತಿ ಕಳೆದುಹೋಗಿತ್ತು. ಅಂದು ನಮ್ಮ ಕೋಣೆಯೊಳಗೆ ನಿಜಕ್ಕೂ ಏನಾಗಿತ್ತು ಎಂದು ಹೊರ ಪ್ರಪಂಚಕ್ಕೆ ಗೊತ್ತೇ ಆಗಿರಲಿಲ್ಲ. ನಾನು ಬಾಯಿ ಬಿಡಲಿಲ್ಲ. ಪ್ರತೀ ಸಲ ನನ್ನನ್ನು ಎಲ್ಲರೂ ಹಂಗಿಸಿ ಮಾತನಾಡುವಾಗ ಇವರು ಆ ಬಿದಿರಿನ ಕೋಲನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಿದ್ದರು. ಆಗೆಲ್ಲಾ ಪ್ರತೀ ದಿನ ಚುಚ್ಚು ಮಾತುಗಳು.

‘‘ಇವಳಿಂದ ಯಾವ ಸುಖ ಸಿಗೋಕೆ ಸಾಧ್ಯ? ಒಂದು ಹೆತ್ತರೂ, ಅದನ್ನು ಬಲಿ ತೆಗೊಂಡ ಮೇಲೆ ಬಂಜೆಯೇ. ನಿನಗೆ ಬೇರೆ ಮದುವೆ ಆಗಬಹುದಲ್ವಾ ಶೇಖರ? ಅವಳೂ ಒಂದು ಮೂಲೆಯಲ್ಲಿ ಇದ್ದು ಬಿಡಲಿ ಬಿಡು. ನಮ್ಮನೇಲಿ ಅನ್ನಕ್ಕೆ ಏನು ಬರ ಬಂದಿದೆ’’ ಇಂತಹದ್ದೇ ಮಾತು ರಾತ್ರಿ ಹಗಲು.